# ಮತ್ತೆ ಅಲ್ಲಮ!

**ಅಲ್ಲಮನ ಗುಂಗು ಸಿನಿಮಾದವರಿಗೆ ಅಂಟಿಕೊಂಡಿದೆ. ಮೂರು ವರ್ಷಗಳ ಹಿಂದೆ ನಾಗಾಭರಣ 'ಅಲ್ಲಮ' ಸಿನಿಮಾ ಮಾಡಿದ್ದರು. ಮತ್ತೊಮ್ಮೆ ಅಲ್ಲಮ ತೆರೆಯಮೇಲೆ ಅವತರಿಸಲು ಸಜ್ಜಾಗಿದ್ದಾನೆ. ಇದು ಉತ್ತರ ಕರ್ನಾಟಕ ಭಾಗದಲ್ಲಿನ ಹಬ್ಬಿರುವ ಮೌಖಿಕ ಚರಿತ್ರೆಯನ್ನೇ ಆಧಾರವಾಗಿಟ್ಟುಕೊಂಡು ರೂಪುಗೊಳ್ಳುತ್ತಿರುವ ಸಿನಿಮಾ.**

**ಪದ್ಮನಾಭ ಭಟ್**



ಸಚಿನ್ ಸುವರ್ಣ






ಮೂರು ವರ್ಷಗಳ ಹಿಂದೆ, ಅಂದರೆ 2017ರ ಜನವರಿಯಲ್ಲಿ ತೆರೆಕಂಡಿದ್ದ, ಟಿ.ಎಸ್. ನಾಗಾಭರಣ ನಿರ್ದೇಶನದ 'ಅಲ್ಲಮ' ಸಿನಿಮಾ ರಾಷ್ಟ್ರಪ್ರಶಸ್ತಿಗಳನ್ನೂ ಪಡೆದುಕೊಂಡಿತ್ತು. ಈಗ ಗಾಂಧಿನಗರದಲ್ಲಿ ಮತ್ತೊಮ್ಮೆ 'ಅಲ್ಲಮ' ಅವತರಿಸುತ್ತಿದ್ದಾನೆ. ಹಾಗೆಂದು ಈಗ ಅವತರಿಸುತ್ತಿರುವ ಅಲ್ಲಮನಿಗೂ ನಾಗಾಭರಣ ಅವರಿಗೂ ಯಾವ ಸಂಬಂಧವೂ ಇಲ್ಲ. ಅಷ್ಟೇ ಅಲ್ಲ, ಆ ಸಿನಿಮಾದಲ್ಲಿ ಕಾಣಿಸಿದ್ದಕ್ಕಿಂತ ಇಲ್ಲಿ ಅಲ್ಲಮನ ವ್ಯಕ್ತಿತ್ವದ ಭಿನ್ನ ಛಾಯೆಗಳು ಕಾಣಿಸಲಿವೆಯಂತೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳಬೇಕೆಂದರೆ, ನಾಗಾಭರಣ ಅವರ ನಿರ್ದೇಶನದ ಸಿನಿಮಾದಲ್ಲಿ ಅಲ್ಲಮನ ಬದುಕು, ಪವಾಡಗಳನ್ನು ಅಷ್ಟು ಸಮಂಜಸವಾಗಿ ಚಿತ್ರಿಸಿಲ್ಲ ಎಂಬ ಅನಿಸಿಕೆ ಈ 'ಅಲ್ಲಮ'ನ ಅವತಾರಕ್ಕೆ ಕಾರಣಗಳಲ್ಲೊಂದು.

ಡಿ.ಕೆ. ಶಿವರಾಜ್ 'ಅಲ್ಲಮ'ನಿಗೆ ಆ್ಯಕ್ಷನ್–ಕಟ್ ಹೇಳುತ್ತಿದ್ದಾರೆ. ಪಿ.ಎಚ್. ವಿಶ್ವನಾಥ್ ಮತ್ತು ಫಣಿ ರಾಮಚಂದ್ರ ಅವರ ಜೊತೆಗೆ ಹಲವು ಸಿನಿಮಾಗಳಲ್ಲಿ ಸಹಾಯಕರಾಗಿ ಕೆಲಸ ಮಾಡಿದ ಅನುಭವ ಇರುವ ಶಿವರಾಜ್ ಅವರು 'ಚೈತನ್ಯ' ಎಂಬ ಮಕ್ಕಳ ಸಿನಿಮಾವನ್ನು ನಿರ್ದೇಶಿಸಿದ್ದಾರೆ. ಈ ಸಿನಿಮಾಗೆ ರಾಜ್ಯಪ್ರಶಸ್ತಿ ಬಂದಿದೆ. 'ವ್ಯೋಮಕಾಯ ಸಿದ್ಧ ಶ್ರೀ ಅಲ್ಲಮಪ್ರಭು' ಇವರ ಎರಡನೇ ಸಿನಿಮಾ.

ಮಾಧವಾನಂದ ಎನ್ನುವವರು 'ಅಲ್ಲಮ' ಚಿತ್ರಕ್ಕೆ ಹಣ ಹೂಡುತ್ತಿದ್ದಾರೆ. ಅಷ್ಟೇ ಅಲ್ಲ, ಈ ಸಿನಿಮಾದ ಕಥೆ, ಚಿತ್ರಕಥೆಯನ್ನೂ ಅವರೇ ರೂಪಿಸಿದ್ದಾರಂತೆ.

'ಅಲ್ಲಮನ ಬದುಕಿನ ಕಥೆಗಳು ಒಂದೊಂದು ಕಡೆ ಒಂದೊಂದು ರೀತಿ ಹಬ್ಬಿವೆ. ಮಾಧವಾನಂದ ಅವರು ಉತ್ತರ ಕರ್ನಾಟದ ತೇರದಾಳ ಸುತ್ತಮುತ್ತಲಿನ ಮೌಖಿಕ ಚರಿತ್ರೆಯನ್ನೇ ಗಮನದಲ್ಲಿಟ್ಟುಕೊಂಡು, ಅಲ್ಲಿ ವ್ಯಕ್ತವಾದ ಚಿತ್ರಣವನ್ನು ಸಿನಿಮಾ ಮಾಡುವ ಉದ್ದೇಶ ಹೊಂದಿದ್ದಾರೆ. ಅದಕ್ಕೆ ಅನುಗುಣವಾಗಿ ಚಿತ್ರಕಥೆಯನ್ನೂ ಸಿದ್ಧಮಾಡಿಕೊಂಡಿದ್ದಾರೆ. ನಾನು ಮೊದಲು ಅಲ್ಪ ಸ್ವಲ್ಪ ಅಲ್ಲಮನನ್ನು ಓದಿಕೊಂಡಿದ್ದೆ. ಈಗ ಈ ಸಿನಿಮಾಗೆ ಸಿದ್ಧನಾಗುವ ಉದ್ದೇಶದಿಂದ ಅವರ ಬಗ್ಗೆ ಅಧ್ಯಯನದಲ್ಲಿ ತೊಡಗಿಕೊಂಡಿದ್ದೇನೆ' ಎಂದು ವಿವರಿಸುತ್ತಾರೆ ಶಿವರಾಜ್.

'ಬಸವಣ್ಣನವರು ಭಕ್ತಿಗೆ ಹೆಚ್ಚು ಪ್ರಾಧಾನ್ಯ ನೀಡಿದರೆ, ಅಲ್ಲಮಪ್ರಭುಗಳು ಜ್ಞಾನಕ್ಕೆ ಹೆಚ್ಚಿನ ಪ್ರಾಧಾನ್ಯ ನೀಡಿದರು. ಇದನ್ನೇ ಮುಖ್ಯವಾಗಿಟ್ಟುಕೊಂಡು ಸಿನಿಮಾ ರೂಪಿಸುತ್ತಿದ್ದೇವೆ' ಎಂದೂ ಅವರು ಹೇಳುತ್ತಾರೆ.

ನಾಗಾಭರಣ ನಿರ್ದೇಶನದ 'ಅಲ್ಲಮ'ನಿಗಿಂತ ಬೇರೆ ರೀತಿಯಲ್ಲಿ ಕಾಣಿಸುವ ಉದ್ದೇಶವೂ ಚಿತ್ರತಂಡಕ್ಕಿದೆ. ಇಲ್ಲಿ ಅಲ್ಲಮನ ಬಾಲ್ಯಕ್ಕೂ ಸಾಕಷ್ಟು ಒತ್ತು ನೀಡಲಾಗಿದೆ.

'ಎನ್‌ಕೌಂಟರ್ ದಯಾನಾಯಕ್' ಸಿನಿಮಾದಲ್ಲಿ ನಟಿಸಿದ್ದ ಸಚಿನ್ ಸುವರ್ಣ ಎಂಬ ಹುಡುಗ ಅಲ್ಲಮನಾಗಿ ಈ ಚಿತ್ರದಲ್ಲಿ ನಟಿಸಲಿದ್ದಾರೆ. ಎತ್ತರದ ಆಳ್ತನದ ದಷ್ಟಪುಷ್ಟ ವ್ಯಕ್ತಿಯೇ ಅಲ್ಲಮನಾಗಿ ನಟಿಸಬೇಕು ಎಂಬ ನಿರ್ಮಾಪಕರ ಆಸೆಗೆ ಸಚಿನ್ ಹೊಂದಿಬಂದಿದ್ದಾರೆ. ಉತ್ತರ ಕರ್ನಾಟಕದ ಹಲವು ಸ್ವಾಮೀಜಿಗಳೂ ಅವರನ್ನು ನೋಡಿ ಅಲ್ಲಮನ ಪಾತ್ರಕ್ಕೆ ಹೊಂದುತ್ತಾರೆ ಎಂದು ಮೆಚ್ಚುಗೆ ಸೂಚಿಸಿದ್ದಾರಂತೆ.

ಅಲ್ಲಮನ ಪವಾಡಗಳನ್ನೂ ತೋರಿಸುತ್ತಲೇ, ಅವನು ಸಾಮಾನ್ಯ ಮನುಷ್ಯನಾಗಿಯೇ ಹೇಗೆಲ್ಲ ಜ್ಞಾನಸಂಪಾದನೆ ಮಾಡಿದ ಎಂಬುದನ್ನೂ ತೋರಿಸುವ ರೀತಿಯ ಸಿನಿಮಾ ಮಾಡಬೇಕು ಎಂಬುದು ನಿರ್ದೇಶಕರ ಹಂಬಲ.

ವಿಜಯಾ ಫಿಲ್ಮ್ ಇನ್‌ಸ್ಟಿಟ್ಯೂಟ್‌ನ ಕುಮಾರ್ ಈಶ್ವರ್ ಎಂಬುವವರು ಈ ಚಿತ್ರಕ್ಕೆ ಸಂಗೀತ ಸಂಯೋಜನೆ ಮಾಡುತ್ತಿದ್ದಾರೆ. ಚಿತ್ರದ ಉಳಿದ ಪಾತ್ರಗಳಿಗೆ ಇನ್ನೂ ತಾರಾಬಳಗ ಆಯ್ಕೆಯಾಗಬೇಕಾಗಿದೆ. ಬಸವಣ್ಣನ ಪಾತ್ರಕ್ಕೂ ಸರಿಯಾದ ಪಾತ್ರವನ್ನು ಹುಡುಕುತ್ತಿದ್ದಾರೆ.

ಬನವಾಸಿ ಸುತ್ತಮುತ್ತಲೇ ಚಿತ್ರೀಕರಣ ಮಾಡುವ ಆಲೋಚನೆ ನಿರ್ದೇಶಕರದ್ದು. ಮಧುಕೇಶ್ವರ ದೇವಾಲಯವನ್ನೇ ಚಿತ್ರೀಕರಣಕ್ಕೆ ಕೇಂದ್ರಸ್ಥಳವನ್ನಾಗಿಸಿಕೊಂಡಿದ್ದಾರೆ. ಅನುಭವ ಮಂಟಪದ ಸೆಟ್ ಅನ್ನು ಬೆಂಗಳೂರಿನಲ್ಲಿಯೇ ಹಾಕಲು ಯೋಜಿಸಲಾಗಿದೆ.

ಮಾಯಾದೇವಿಯ ಪಾತ್ರಕ್ಕೆ ಸೂಕ್ತ ನಟಿಯ ಶೋಧನೆಯಲ್ಲಿ ಚಿತ್ರತಂಡ ತೊಡಗಿದೆ. ಸಾಧ್ಯವಾದರೆ ಕನ್ನಡದ ಪ್ರಸಿದ್ಧ ನಾಯಕಿ ನಟಿಯರಲ್ಲೊಬ್ಬರನ್ನು ಈ ಪಾತ್ರಕ್ಕೆ ಬಳಸಿಕೊಳ್ಳಬೇಕು ಎಂಬ ಹಂಬಲವೂ ನಿರ್ದೇಶಕರಿಗಿದೆ. ಜನವರಿ ಮೊದಲ ವಾರದಿಂದ ಚಿತ್ರೀಕರಣ ಪ್ರಾರಂಭಿಸುವ ಯೋಜನೆಯನ್ನು ಚಿತ್ರತಂಡ ಹಾಕಿಕೊಂಡಿದೆ.

'ಸಣ್ಣ ಬಜೆಟ್‌ನಲ್ಲಿಯೇ ಸಾಧ್ಯವಾದಷ್ಟೂ ಚೆನ್ನಾಗಿ ಅಲ್ಲಮನ ಬದುಕು ಮತ್ತು ತತ್ತ್ವವನ್ನು ಜನರ ಮನಸ್ಸಿಗೆ ಹತ್ತಿರವಾಗುವ ಹಾಗೆ ಚಿತ್ರಿಸುವುದು ನಮ್ಮ ಉದ್ದೇಶ. ಈ ಸಿನಿಮಾ ಅಲ್ಲಮನನ್ನು ಜನರ ಮನಸ್ಸಿಗೆ ಇನ್ನಷ್ಟು ಹತ್ತಿರವಾಗುವಂತೆ ಮಾಡುತ್ತದೆ' ಎಂದು ವಿಶ್ವಾಸದಿಂದ ನುಡಿಯುತ್ತಾರೆ ಶಿವರಾಜ್.